**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 27-08-1969.**

**(ओम शान्ति,  बापदादा. अव्यक्त मुरली 27-08-1969)**

*ಸಹಯೋಗ ಪಡೆಯುವ ಸಾಧನವಾಗಿದೆ ಸಾಹಸ* (ಸಂತರಿ ದಾದಿಯವರ ತನುವಿನ ಮುಖಾಂತರ)

**(मदद लेने** का **साधन है हिम्मत)**

ಇಂದು ಚಿಕ್ಕ ಹೂದೋಟದಲ್ಲಿ ಸುತ್ತಾಡಲು ಬಂದಿದ್ದೇವೆ. ಆತ್ಮಿಕ ಮಕ್ಕಳನ್ನು ಸಮ್ಮುಖದಲ್ಲಿ ಮಿಲನ ಮಾಡಲು ಬಂದಿದ್ದೇವೆ. ತಂದೆ ಇವರೆಲ್ಲ ನಮ್ಮ ರತ್ನಗಳು, ಕಣ್ಮಣಿಯಾಗಿ ಮಕ್ಕಳು ಸದಾ ಆತ್ಮಕ ಗುಲಾಬಿ ಹೂಗಳಂತೆ ಸುಗಂಧವನ್ನು ಕೊಡುತ್ತಿರುತ್ತಾರೆ. ಎಷ್ಟು ತಂದೆಗೆ ವಿಶ್ವಾಸವಿದೆಯೋ ಅಷ್ಟು ಮಕ್ಕಳಲ್ಲಿ ಸಾಹಸವಿದೆಯೇ? ಇಂದು ಮಕ್ಕಳು ಕರೆದಿಲ್ಲ. ಕರೆಯದೆಯೇ ತಂದೆ ಬಂದಿದ್ದಾರೆ. ಇದು ಅನಾದಿ, ಮಾಡಿ ಮಾಡಲ್ಪಟ್ಟ ನಿಯಮವಾಗಿದೆ. ಸಂಗಮದಲ್ಲಿ ಅಲಂಕರಿಸಲು ತಂದೆ ಕೇಳದೆಯೇ ಬರಬೇಕಾಗುತ್ತದೆ. ಇಂದು ಈ ಹೂದೋಟದಲ್ಲಿ ಕುಳಿತಂತಹವರು, ಹೂಗುಚ್ಛದಲ್ಲಿ ಶೋಭೆಗೆ ಯೋಗ್ಯವಾದ ಹೂಗಳೆಂದು ತಮ್ಮನ್ನು ತಾವು ತಿಳಿದುಕೊಳ್ಳುತ್ತೀರಾ ಎಂದು ಮಕ್ಕಳಿಗೆ ಪ್ರಶ್ನೆ ಕೇಳುತ್ತೇವೆ. ರಕ್ಷಾಬಂಧನದ ರಹಸ್ಯವೇನು?

ಇಂದು ತಂದೆ ಮಕ್ಕಳನ್ನು ಮಿಲನ ಮಾಡಲು ಬಂದಿದ್ದಾರೆ. ಬಹಳ ದೊಡ್ಡ ಜವಾಬ್ದಾರಿಯಿದೆ. ಸಣ್ಣಪುಟ್ಟ ಜವಾಬ್ದಾರಿ ತೆಗೆದುಕೊಂಡರೆ ಎಷ್ಟೊಂದು ದಣಿಯುತ್ತಾರೆ. ಇಡೀ ಸೃಷ್ಟಿಯ ಭಾರ ಯಾರ ಮೇಲಿದೆ? ಭಾರವನ್ನು ತಲೆಯ ಮೇಲೆ ಏರಿಸಿಕೊಳ್ಳಬೇಕು ಮತ್ತು ಇಳಿಸಬೇಕು ಆದರೆ ದಣಿಯಬಾರದು. ಮಕ್ಕಳಿಗೆ ಏಕೆ ದಣಿವಾಗುತ್ತದೆ? ಏಕೆಂದರೆ ತಮ್ಮನ್ನು ತಾವು ಆತ್ಮಿಕ ಗುಲಾಬಿಯೆಂದು ತಿಳಿಯುವುದಿಲ್ಲ. ಆತ್ಮ ಎಂದು ತಿಳಿದಾಗ ದೇಹದಿಂದ ಅಲಿಪ್ತ ಮತ್ತು ಪ್ರಿಯರಾಗಿರುವಿರಿ. ಹೇಗೆ ತಂದೆಯೋ ಹಾಗೆಯೇ ಮಕ್ಕಳು. ಎಷ್ಟು ಸಾಹಸವಿದೆಯೋ ಅಷ್ಟೇ ಸಹಾಯವನ್ನು ತಂದೆ ಮಾಡುತ್ತಿರುವರು. ಸಾಹಸದಿಂದ ಸಹಯೋಗ ಸಿಗುತ್ತದೆ ಮತ್ತು ಸಹಯೋಗದಿದಲೇ ಬೆಟ್ಟ ಎತ್ತಲ್ಪಡುತ್ತದೆ. ಕಲಿಯುಗದ ಮಣ್ಣಿನ ಬೆಟ್ಟವನ್ನು ಎತ್ತಿ ಸತ್ಯಯುಗದ ಸುವರ್ಣವನ್ನಾಗಿ ಮಾಡಬೇಕು. ಆದರೆ ಹೇಗೆ ಮಾಡಬೇಕು? ಎಂಬ ವಿನಂತಿ  ಪ್ರಶ್ನೆಯಲ್ಲಿಯೂ ಇದೆ. ಆದ್ದರಿಂದ ಇಂದು ಸ್ವಲ್ಪ ಸಮಯ ಮಿಲನ ಮಾಡಲು ತಂದೆಗೆ ಬರಬೇಕಾಯಿತು. ತಂದೆಗೆ ಇಚ್ಛೆಯಾಗುತ್ತದೆಯೇ? ಅವರಂತೂ ಇಚ್ಛೆಯಿಂದ ಅಲಿಪ್ತ, ಇಚ್ಛಾರಹಿತರಾಗಿದ್ದಾರೆ. ಆದರೂ ಇಚ್ಛೆ ಏಕೆ? ತಾವೆಲ್ಲರೂ ಇಚ್ಛಾ ರಹಿತರಾಗಿದ್ದರಿಂದ  ತಂದೆಗೆ ಇಚ್ಛೆಯಾಯಿತು. ತಂದೆ ಮಕ್ಕಳನ್ನು ಹೇಗೆ ಸಂಭಾಲನೆ ಮಾಡುತ್ತಿದ್ದರು ಮತ್ತು ಸಂಭಾಲನೆ ಮಾಡುತ್ತಿದ್ದಾರೆಂದು ನೀವು ತಿಳಿದಿಲ್ಲ. ಇಷ್ಟೊಂದು ಜವಾಬ್ದಾರಿಯನ್ನು ಯುಕ್ತಿಯಿಂದ ಸಂಭಾಲನೆ ಮಾಡಿ ತಂದೆಯ ಇಚ್ಛೆಯನ್ನು ಪೂರ್ಣ ಮಾಡಿ ಈಗ ಮಕ್ಕಳ ಇಚ್ಛೆಯನ್ನೂ ಪೂರ್ಣ ಮಾಡುತ್ತಿದ್ದಾರೆ. ಇದನ್ನೇ ಬುದ್ಧಿ ಮತ್ತು ರಮಣೀಯತೆಯುಳ್ಳವರು ಎಂದು ಹೇಳುತ್ತಾರೆ. ತಂದೆಗೆ ಎಲ್ಲಾ ಮಕ್ಕಳ ಇಚ್ಛೆಯನ್ನು ಪೂರ್ಣ ಮಾಡುತ್ತಾ ಮತ್ತೆ ತಮ್ಮದನ್ನೂ ನಡೆಸಬೇಕಾಗುತ್ತದೆ. ಮಕ್ಕಳ ಇಚ್ಛೆಯನ್ನು ಏಕೆ ಪೂರ್ಣ ಮಾಡುತ್ತಾರೆ? ಏಕೆಂದರೆ ಮಕ್ಕಳು ಕಣ್ಣಿನ ರತ್ನಗಳಾಗಿದ್ದೀರಿ, ಆದ್ದರಿಂದಲೇ ಮೊದಲು ಮಕ್ಕಳು ನಂತರ ತಂದೆ. ಮುಕುಟಮಣಿಯನ್ನು ಆಗಾಗ ತಲೆಯ ಮೇಲೆಯೂ ಇಟ್ಟುಕೊಳ್ಳಬೇಕಾಗುತ್ತದೆ. ಪುರುಷಾರ್ಥ ಮಾಡುತ್ತಾ ತಣ್ಣಗಾಗಿ ಬಿಡುತ್ತೀರಿ ಆದ್ದರಿಂದ ಪುರುಷಾರ್ಥವನ್ನು ಮುಂದುವರೆಸಲು ಪ್ರಯತ್ನ ಮಾಡಿ, ಆದ್ದರಿಂದ ಪೂರ್ಣ ಕಂಕಣಬದ್ಧರಾಗಿದ್ದೀರಾ ಎಂದು ಪ್ರಶ್ನೆ ಕೇಳುತ್ತಿದ್ದೇವೆ? **ಭೂಮಿ ಬಿರಿದರೂ ಧರ್ಮ ಬಿಡಬಾರದು**. ಇಂದಿನ ದಿನ ವಿರೋಧಿಗಳೂ ಶತ್ರುಗಳಿಂದ ಮಿತ್ರರಾಗುತ್ತಾರೆ.

ಯಾವಾಗಲೂ ಮಕ್ಕಳು ಹೆಜ್ಜೆಯನ್ನು ಮುಂದಿಡಬೇಕು. ದೃಷ್ಟಿ ಸದಾ ಸಿಗಲಿರುವ ಕಿರೀಟ ಮತ್ತು ಸಿಂಹಾಸನದ ಮೇಲಿರಲಿ. ನಾವು ಹೀಗೆ ಆಗುತ್ತೇವೆಂದು ಕೇವಲ ಹೇಳಲಿಕ್ಕಲ್ಲದೇ ಧಾರಣೆ ಮಾಡಿ ತೋರಿಸಬೇಕು. ಲಕ್ಷ್ಮಿ ನಾರಾಯಣರು ಹೇಗೆ ನಡೆಯುತ್ತಾರೆ, ಹೇಗೆ ಹೆಜ್ಜೆ ಇಡುತ್ತಾರೆ, ಹೇಗೆ ಕಣ್ಣುಗಳನ್ನು ಮೇಲೆ ಕೆಳಗೆ ಮಾಡುತ್ತಾರೆ ಆ ರೀತಿ ನಡೆ-

ನುಡಿಯಿದ್ದರೆ ಲಕ್ಷ್ಮಿ ನಾರಾಯಣರಾಗುತ್ತೀರಿ. ಈಗ ಕಣ್ಣು ಮೇಲೆ ಮಾಡಿದರೆ ನನ್ನ ಸಮಾನರು ಯಾರು ಇಲ್ಲವೆಂಬ ದೇಹಾಭಿಮಾನ ಬರುತ್ತದೆ. ನನ್ನದು ನಿನ್ನದು ಬಂದು ಬಿಡುತ್ತದೆ. ಭಕ್ತಿ ಮಾರ್ಗದಲ್ಲಿಯೂ ನಮ್ರತೆ ಮನುಷ್ಯರ ಕಣ್ಣುಗಳನ್ನು ಬಾಗಿಸುತ್ತದೆಯೆಂದು ಹೇಳುತ್ತಾರೆ. ಪ್ರತಿಯೊಬ್ಬರೂ ತಮ್ಮ ಶೃಂಗಾರವನ್ನು ಮಾಡಿಕೊಳ್ಳಬೇಕು. ಸದಾ ಸುಗಂಧವನ್ನು ಕೊಡಿ. ಯಾವ ಗುರಿ ಸಿಕ್ಕಿದೆಯೋ ಹಾಗೆಯೇ ಲಕ್ಷ್ಮೀನಾರಾಯಣರಾಗಿ, ಸರಿಯಾದ ಮಾರ್ಗದಲ್ಲಿ ಹೋಗಿ. ಹೆಜ್ಜೆ ಮುಂದಿಡಿ. ತಂದೆಯ ಬಳಿ ಇಂದು ಸಂದೇಶಿ ಭೋಗ ತೆಗೆದುಕೊಂಡು ಬಂದಾಗ ಮಕ್ಕಳು ಇಲ್ಲಿಯೇ ರಾಜಕುಮಾರರಾಗಿರುವರೆಂದು ತಂದೆ ಹೇಳಿದರು, ತಂದೆಯ ಬಡತನದ ಪ್ರಸಾದ (ತಿಂಡಿ) ಮರೆತು ಹೋಗಿದೆ. ವೈಭವ ಅಲ್ಲಿ ಸಿಗಲಿದೆ. ಸಂಗಮದಲ್ಲಿ ಬಡತನದ ಪ್ರಸಾದ ನೆನಪಾಗುತ್ತದೆ. ಅದೇ ತಂದೆಗೆ ಪ್ರಿಯ, ಸುದಾಮನ ಅವಲಕ್ಕಿಯ ಬೆಲೆಯಿದೆಯಲ್ಲವೇ? ಈ ಟೋಲಿಯಲ್ಲಿ (ಪ್ರಸಾದ) ಪ್ರೀತಿ ತುಂಬಿದೆ. ಮಾಡುವವರು ಪ್ರೀತಿಯನ್ನು ತುಂಬಿದ್ದಾರೆ ಮತ್ತು ತಂದೆ ಇನ್ನಷ್ಟು ಪ್ರೀತಿಯನ್ನು ತುಂಬಿ ಮಕ್ಕಳಿಗೆ ತಿನ್ನಿಸುತ್ತಾರೆ. (ಸಿಂಧಿ ಹಲ್ವಾ ತಿನಿಸಿದರು) ದೀದಿ ಸೇವೆ ಪೂರ್ಣ ಮಾಡಿ ಬಂದಿದ್ದಾರೆ. ಎಲ್ಲವೂ ಸರಿಯಾಗಿತ್ತು, ಕಾಯಿದೆಯ ಅನುಸಾರ ಎಲ್ಲವೂ ನಡೆಯುತ್ತಿದೆಯೇ? ಭಯಪಡುವ ಮಾತಿಲ್ಲ. ಸಮಯದ ಬಲಿಹಾರಿ. ಮಕ್ಕಳಂತೂ ಪ್ರತಿಯೊಂದು ವಿಷಯದಲ್ಲಿಯೂ ಪುರುಷಾರ್ಥವನ್ನು ಮಾಡಬೇಕು. ಸಮಯವನ್ನು ನೋಡಿಕೊಂಡು ಅವಿನಾಶಿ ಜ್ಞಾನ ಯಜ್ಞದ ಕುಂಡವೆಂದು ಯಾವುದಕ್ಕೆ  ಹೇಳಲಾಗುತ್ತದೆಯೋ ಅದನ್ನು ತುಂಬಿಸಬೇಕು, ಸ್ವಾಹಾ ಮಾಡಬೇಕು. ಇದಂತೂ ಸದಾ ಇರುವುದು.ಯಜ್ಞಗಳಂತೂ 10-12 ದಿನ ನಡೆಯುತ್ತವೆ ನಂತರ ಹೇಗಿತ್ತೋ ಹಾಗೆಯೇ ಆಗುವುದು. ಇದು ಅವಿನಾಶಿ ಯಜ್ಞವಾಗಿದೆ. ಶಿವತಂದೆಯ ಭಂಡಾರ ಭರಪೂರ, ಕಾಲ ಕಂಟಕ(ಕಷ್ಟ)ಗಳು ದೂರವಾಗುತ್ತದೆ. ಹೊಸ ಪ್ರಪಂಚಕ್ಕೆ ಹೋದಾಗ ದೂರವಾಗುತ್ತದೆ, ಎಲ್ಲ ಸರಿಯಾಗಿಯೇ ನಡೆಯುತ್ತದೆ. ಕೇವಲ ಮಕ್ಕಳ ಬುದ್ಧಿ ಚುರುಕು ಮತ್ತು ದೂರಾದೇಶಿಯಾಗಬೇಕು. ದೂರಾದೇಶಿ ಮಾಡಲು ಕಿರೀಟ ಮತ್ತು ಸಿಂಹಾಸನವನ್ನು ಕೊಡಲಾಗಿದೆ. ಒಳ್ಳೆಯದು.

ಮುರಳಿ 27-08-1969.

**ಸಹಯೋಗ ಪಡೆಯುವ ಸಾಧನವಾಗಿದೆ ಸಾಹಸ.**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಸುಗಂಧವನ್ನು ಹೊರಸೂಸುವ (ಅವ್ಯಕ್ತ ಮುರಳಿ 18-01-1980) ಆತ್ಮಿಕ ಗುಲಾಬಿ.

2. ನಾನು ಈ ಕಲಿಯುಗದ ಮಣ್ಣಿನ ಪರ್ವತವನ್ನು ಎತ್ತಿ ಸತ್ಯಯುಗದ ಸುವರ್ಣವನ್ನಾಗಿ ಮಾಡಲು ನನ್ನ ಸಂಪೂರ್ಣ(100%) ಸಾಹಸವನ್ನಿಟ್ಟು ತಂದೆಯಿಂದ ಸಂಪೂರ್ಣ(100%) ಸಹಯೋಗವನ್ನು ಪಡೆದಿದ್ದೇನೆ.

3. ನಾನು ತಂದೆಯ ಮತ್ತು ಮಕ್ಕಳೆಲ್ಲರ (ಜಗನ್ಮಾತೆಯ ಸ್ವರೂಪದಲ್ಲಿ) ಇಚ್ಛೆಯನ್ನು ಪೂರ್ಣ ಮಾಡುವ ವರದಾನೀ ಸ್ವರೂಪ.

4. ನಾನು ಭೂಮಿ ಬಿರಿದರೂ ಧರ್ಮ ಬಿಡದ ಕಂಕಣಬದ್ಧ ಸ್ವರೂಪ.

5. ನಾನು ಲಕ್ಷ್ಮಿ ನಾರಾಯಣರ ಸಮಾನ ನಡೆನುಡಿ ಇರುವ ಧಾರಣಾ ಸ್ವರೂಪ.

6. ನಾನು ಕಿರೀಟ (ಜವಾಬ್ದಾರಿ) ದಿಂದ & ಸಿಂಹಾಸನ (ನಮ್ರಚಿತ್ತ) ದಿಂದ ನನ್ನ ಬುದ್ಧಿಯನ್ನು ಚುರುಕು ಮತ್ತು ದೂರದೇಶಿಯನ್ನಾಗಿ ಮಾಡಿಕೊಂಡಿದ್ದೇನೆ.